ಅನುಬಂಧ - 4

## ಮಾರ್ಗದರ್ಶನದ ಟಿಪ್ಪಣಿ – ಗ್ರಾಹಕರು ಮಾಡಬೇಕಾದ್ದು ಹಾಗೂ ಮಾಡಬಾರದ್ದು

**ಮಾಡಬೇಕಾದ್ದವು**

1. ಎಕ್ಸ್ ಚೇಂಜ್‌ನ ನೋಂದಾಯಿತ ಸದಸ್ಯರ (Members / Stock Brokers) ಮೂಲಕ ಮಾತ್ರ ವ್ಯವಹರಿಸಿ. ಸದಸ್ಯರು ಎಕ್ಸ್ ಚೇಂಜ್‌ನಲ್ಲಿ ನೋಂದಣಿ ಹೊಂದಿದ್ದಾರೆಯೇ ಎಂದು ನೋಡಲು ಕೆಳಗಿನ ಎಕ್ಸ್ ಚೇಂಜ್‌ನ ವೆಬ್‌ಸೈಟ್ ಅನ್ನು ಪರಿಶೀಲಿಸಿ.
2. ನೀವು ವ್ಯಾಪಾರ ಪ್ರಾರಂಭಿಸುವುದನ್ನು ಪ್ರಾರಂಭಿಸುವ ಮೊದಲು 'ನಿಮ್ಮ ಗ್ರಾಹಕರನ್ನು (client / investor) ತಿಳಿದುಕೊಳ್ಳಿ (KYC)' ಎನ್ನುವ ನಮೂನೆಯನ್ನು ಭರ್ತಿ ಮಾಡಲು ಒತ್ತಾಯ ಮಾಡಿ.
3. ಒಂದು ವಿಶಿಷ್ಟ ಗ್ರಾಹಕ ಕೋಡ್ (UCC) ಪಡೆಯಲು ಒತ್ತಾಯ ಮಾಡಿ ಮತ್ತು ನಿಮ್ಮೆಲ್ಲ ವಹಿವಾಟುಗಳು UCC ಕೆಳಗೇ ನಡೆಯುತ್ತವೆಂದು ಖಚಿತಪಡಿಸಿಕೊಳ್ಳಿ.
4. ಒಂದು ಪ್ರಮಾಣಿತ 'ರಿಸ್ಕ್ ಡಿಸ್‌ಕ್ಲೋಸರ್ ಡಾಕ್ಯೂಮೆಂಟ್' ಓದಲು ಮತ್ತು ಸಹಿ ಹಾಕಲು ಒತ್ತಾಯ ಮಾಡಿ.
5. ಸದಸ್ಯರ ಜೊತೆ ನೀವು ಕಾರ್ಯಗತಗೊಳಿಸಿದ ನಿಮ್ಮ KYC ಮತ್ತು / ಅಥವಾ ಸದಸ್ಯರ ಇತರ ದಾಖಲೆಗಳ ನಕಲನ್ನು ಪಡೆಯಿರಿ.
6. ಎಕ್ಸ್ ಚೇಂಜ್ ವೆಬ್‌ಸೈಟ್‌ನ ಕೆಳಗಿನ ಲಿಂಕ್‌ನಲ್ಲಿ ಎಕ್ಸ್ ಚೇಂಜ್‌ನಲ್ಲಿ ನಡೆಸಿದ ವ್ಯಾಪಾರಗಳ ನೈಜತೆಯನ್ನು ಪರಿಶೀಲಿಸಿ ವಹಿವಾಟುಗಳು ಆನ್‌ಲೈನ್‌ನಲ್ಲಿ ವ್ಯಾಪಾರ ನಡೆದ ದಿನಾಂಕದಿಂದ 5 ಕೆಲಸದ ದಿನಗಳವರೆಗೆ ಲಭ್ಯವಿರುತ್ತಿದ್ದು ಅವುಗಳನ್ನು ಅಲ್ಲಿ ಪರಿಶೀಲಿಸಬಹುದು.
7. ಪ್ರತೀ ನಡೆದ ವ್ಯಾಪಾರಕ್ಕೆ ವ್ಯಾಪಾರ ನಡೆದ 24 ಗಂಟೆಗಳೊಳಗೆ ಸೂಕ್ತವಾಗಿ ಸಹಿ ಮಾಡಿದ ಕಾಂಟ್ರಾಕ್ಟ್ ನೋಟ್‌ಗಾಗಿ ಕೇಳಿ. ಇದು ನಿಮ್ಮ UCC ಜೊತೆಗೆ ವ್ಯಾಪಾರದ ವಿವರಗಳನ್ನು ಮುಖ್ಯವಾಗಿ ವಿವರಿಸಿರಬೇಕು.
8. ಕಾಂಟ್ರಾಕ್ಟ್ ನೋಟ್ ಸದಸ್ಯರ ನೋಂದಣಿ ಸಂಖ್ಯೆ, ಆದೇಶ ಸಂಖ್ಯೆ, ಆದೇಶ ದಿನಾಂಕ, ಆರ್ಡರ್ ಸಮಯ, ವ್ಯಾಪಾರ ಸಂ, ವ್ಯಾಪಾರ ದರ, ಪ್ರಮಾಣ, ಪಂಚಾಯ್ತಿಯ ಷರತ್ತು, ಇತ್ಯಾದಿ ಎಲ್ಲಾ ಸಂಬಂಧಿತ ಮಾಹಿತಿಯನ್ನು ಒಳಗೊಂಡಿದೆಯೆಂದು ಖಚಿತಪಡಿಸಿಕೊಳ್ಳಿ.
9. ಲಾಭಕ್ಕಾಗಿ ಸದಸ್ಯರಲ್ಲಿ ಸಂಗ್ರಹಿಸಿದ ಸ್ವತ್ತುಗಳಿಗೆ ರಸೀತಿ ಪಡೆಯಿರಿ.
10. ನಿಮ್ಮ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ತಿಳಿಯಲು ನಿಯಮಗಳು, ಬೈ-ಲಾಗಳು, ನಿಬಂಧನೆಗಳು, ಸುತ್ತೋಲೆಗಳು, ಮಾರ್ಗದರ್ಶಿಗಳು, ಎಕ್ಸ್ ಚೇಂಜ್‌ನ ಹಾಗೂ ನಿಯಂತ್ರಕರು, ಸರ್ಕಾರ ಮತ್ತು ಇತರ ಅಧಿಕಾರಿಗಳು ಸೂಚನೆಗಳನ್ನು ಓದಿಕೊಳ್ಳಿ.
11. ವಹಿವಾಟುಗಳನ್ನು ಮಾಡುವ ಮೊದಲು ನಿಮ್ಮ ಸದಸ್ಯರ ಬಳಿ ಎಲ್ಲಾ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ಮತ್ತು ನಿಮ್ಮ ಸಂಶಯಗಳನ್ನು ಪರಿಹರಿಸಿಕೊಳ್ಳಿ.

12. ಪ್ರತಿ ಮರುಪಾವತಿಗೂ ಬಿಲ್ಲುಗಳನ್ನು ಪಡೆಯಲು ಒತ್ತಾಯಿಸಿ.

13. ನಿಮ್ಮ ಲೆಡ್ಜರ್ ಖಾತೆಯ ಮಾಸಿಕ ಹೇಳಿಕೆಗಳಿಗಾಗಿ ಒತ್ತಾಯಿಸಿ ಮತ್ತು ಹೇಳಿಕೆಯಲ್ಲಿನ ಯಾವುದೇ ಅಂತರವನ್ನು 7 ಕೆಲಸದ ದಿನಗಳೊಳಗಾಗಿ ನಿಮ್ಮ ಸದಸ್ಯರಿಗೆ ವರದಿ ಮಾಡಿ. ಅತೃಪ್ತಿಕರ ಪ್ರತಿಕ್ರಿಯೆಯಿದ್ದಲ್ಲಿ ಕಾರ್ಯದ ಕಾರಣದ ದಿನಾಂಕದಿಂದ 15 ದಿನಗಳೊಳಗಾಗಿ ಎಕ್ಸ್ ಚೇಂಜ್‌ಗೆ ವ್ಯತ್ಯಾಸವನ್ನು ವರದಿ ಮಾಡಿ.

14. ನಿಮ್ಮ ವ್ಯಾಪಾರ ಹಾಗೂ ಡಿಪಾಸಿಟರಿ ಭಾಗೀದಾರರಿಂದ ನೀವು ಸ್ವೀಕರಿಸುವ ಹಿಡುವಳಿ ಹೇಳಿಕೆಗಳೆರಡನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿ.

15. DPಗಳಿಂದ ನೀಡಲಾದ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್‌ಗಳನ್ನು (DIS) ಸುರಕ್ಷಿತವಾಗಿರಿಸಿ.

16. DIS ಸಂಖ್ಯೆಗಳನ್ನು ಪೂರ್ವಮುದ್ರಣಗೊಳಿಸಲಾಗಿದೆ ಮತ್ತು ನಿಮ್ಮ ಖಾತೆ ಸಂಖ್ಯೆಯನ್ನು (UCC) DIS ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಿ.

17. ದೀರ್ಘಾವಧಿಗೆ ನಿಮ್ಮ ಅನುಪಸ್ಥಿತಿಯಲ್ಲಿ ಅಥವಾ ಆಗಾಗ್ಗೆ ಖಾತೆಯನ್ನು ಬಳಸುತ್ತಿಲ್ಲದ ಸಂದರ್ಭದಲ್ಲಿ ನಿಮ್ಮ ಡಿಮ್ಯಾಟ್ ಖಾತೆಯನ್ನು ನಿಲ್ಲಿಸಿ.

18. ಅಗತ್ಯವಿರುವ ಶುಲ್ಕಗಳನ್ನು ಸಮಯಕ್ಕೆ ಸರಿಯಾಗಿ ಮತ್ತು ಚೆಕ್ ಮೂಲಕ ಮಾತ್ರ ನೀಡಿ ಮತ್ತು ಸದಸ್ಯರಿಂದ ಅದರ ರಶೀದಿ ಕೇಳಿ.

19. ಮಾರಾಟವಾದಲ್ಲಿ ಸರಕುಗಳನ್ನು ಸಮಯಕ್ಕೆ ಸರಿಯಾಗಿ ತಲುಪಿಸಿ ಅಥವಾ ಖರೀದಿಯಾದಲ್ಲಿ ಸಮಯಕ್ಕೆ ಸರಿಯಾಗಿ ಹಣ ನೀಡಿ.

20. ಸರಕು ಜನ್ಯಗಳಿಗೆ ಲೆಕ್ಕಗಾರಿಕೆಯ ಮಾನದಂಡಗಳನ್ನು ಅರ್ಥ ಮಾಡಿಕೊಳ್ಳಿ ಹಾಗೂ ಅನುಸರಿಸಿ.

21. ನಿಮ್ಮ ಮತ್ತು ಸದಸ್ಯರ ನಡುವೆ ಒಪ್ಪಂದವಾದ ಯಾವುದೇ ಐಚ್ಛಿಕ ನಿಮಯಗಳನ್ನು ಓದಿ ಸಹಿ ಮಾಡುವುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಮತ್ತು ಸದಸ್ಯರ ನಡುವೆ ಒಪ್ಪಂದವಾದ ಷರತ್ತುಗಳನ್ನು ನಿಮ್ಮ ಒಪ್ಪಿಗೆಯಿಲ್ಲದೇ ಬದಲಾಯಿಸಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಿ.

22. ವ್ಯಾಪಾರಕ್ಕಾಗಿ ಸದಸ್ಯರು ನಿಮ್ಮ ಮೇಲೆ ವಿಧಿಸುವ ಎಲ್ಲ ದಳ್ಳಾಳಿಕೆ, ಕಮಿಷನ್‌ಗಳು, ಶುಲ್ಕ ಮತ್ತು ಇತರ ದರಗಳನ್ನು ಹಾಗೂ SEBI ಕಮೊಡಿಟಿ ಎಕ್ಸ್ ಚೇಂಜ್ ಮೂಲಕ ನಿರ್ದಿಷ್ಟಪಡಿಸಲಾದ ಸಂಬಂಧಪಟ್ಟ ನಿಬಂಧನೆಗಳ / ಮಾರ್ಗದರ್ಶನಗಳ ಬಗ್ಗೆ ಸ್ಪಷ್ಟ ಕಲ್ಪನೆ ಪಡೆಯಿರಿ.

23. ಪಾವತಿಗಳನ್ನು ಸದಸ್ಯರ ಪರವಾಗಿ ಅಕೌಂಟ್ ಪೇಯೀ ಚೆಕ್ ಮೂಲಕ ಮಾಡಿ. ನೀವು ಸದಸ್ಯರ ಜೊತೆಗಿನ ಪಾವತಿ / ಸರಕುಗಳ ತೇವಣಿಗೆಗಳ ಒಂದು ಕಡತದ ಪುರಾವೆ ಹೊಂದಿದ್ದೀರೆಂದು ಖಚಿತಪಡಿಸಿಕೊಳ್ಳಿ ಹಾಗೂ ಅದು ದಿನಾಂಕ, ಸರಕು, ಪ್ರಮಾಣ, ಇಂಥ ಹಣ ಅಥವಾ ಸರಕುಗಳು (ಗೋದಾಮಿನ ರಶೀತಿಗಳ ರೂಪದಲ್ಲಿ) ಯಾವ ಬ್ಯಾಂಕ್ / ಡಿಮ್ಯಾಟ್ ಖಾತೆಯಲ್ಲಿ ಮತ್ತು ಯಾವ ಬ್ಯಾಂಕ್ / ಡಿಮ್ಯಾಟ್‌ನಿಂದ ಸಂದಾಯವಾಗಿವೆ ಎನ್ನುವ ವಿವರಗಳನ್ನು ಹೊಂದಿರಬೇಕು.

24. ನೀವು ಸದಸ್ಯರಿಗೆ ರನ್ನಿಂಗ್ ಖಾತೆಯನ್ನು ನಿರ್ವಹಿಸುವ ನಿರ್ದಿಷ್ಟ ಅಧಿಕಾರ ನೀಡಿದ್ದಲ್ಲಿ ಎಕ್ಸ್ ಚೇಂಜ್ ಕೇಂದ್ರದಿಂದ ಪಾವತಿಯನ್ನು ಸ್ವೀಕರಿಸಿದ ಒಂದು ಕೆಲಸದ ದಿನದೊಳಗೆ ನಿಧಿಗಳ ಪಾವತಿ ಅಥವಾ ಸರಕುಗಳ ವಿತರಣೆಯನ್ನು (ಸಂದರ್ಭಾನುಸಾರವಾಗಿ) ಮಾಡುವುದಿಲ್ಲ. ಹೀಗಾಗಿ, ಈ ನಿಟ್ಟಿನಲ್ಲಿ, ನೀವು ಸದಸ್ಯರಿಗೆ ಒದಗಿಸಿದ ರನ್ನಿಂಗ್ ಖಾತೆಯ ಧೃಢೀಕರಣವು ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:

a) ನಿಮ್ಮಿಂದ ನೀಡಲ್ಪಟ್ಟ ಇಂತಹ ಅಧಿಕಾರವು ದಿನಾಂಕ ಹೊಂದಿರುತ್ತದೆ ಹಾಗೂ ಇದಕ್ಕೆ ನೀವು ಮಾತ್ರ ಸಹಿ ಮಾಡಬೇಕು ಮತ್ತು ನೀವು ಯಾವುದೇ ಸಮಯದಲ್ಲೂ ಅದನ್ನು ರದ್ದು ಮಾಡಬಹುದು ಎನ್ನುವ ಷರತ್ತನ್ನು ಇದು ಹೊಂದಿರುತ್ತದೆ.

b) ನೀವು ಖಾತೆಯ ಹೇಳಿಕೆಯಿಂದ ಉದ್ಭವಿಸಬಹುದಾದ ಯಾವುದೇ ವ್ಯಾಜ್ಯವನ್ನು ಸಾಧ್ಯವಾದಲ್ಲಿ ನಿಧಿಗಳು/ಸರಕುಗಳು ಅಥವಾ ಹೇಳಿಕೆಗಳನ್ನು ಪಡೆದ 7 (ಏಳು) ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಸದಸ್ಯರ ಗಮನಕ್ಕೆ ತರಬೇಕು. ಯಾವುದೇ ವ್ಯಾಜ್ಯವಿದ್ದಲ್ಲಿ, ಯಾವುದೇ ವಿಳಂಬವಿಲ್ಲದೆ ಸಂಬಂಧಪಟ್ಟ ಸರಕು ಎಕ್ಸ್ ಚೇಂಜ್‌ನ ಹೂಡಿಕೆದಾರರ (ಇನ್ವೆಸ್ಟರ್) ದೂರು ಕೇಂದ್ರಕ್ಕೆ ಲಿಖಿತವಾಗಿ ತಿಳಿಸಿ.

c) ನೀವು ರನ್ನಿಂಗ್ ಖಾತೆಯನ್ನು ನಿರ್ವಹಿಸುವುದನ್ನು ಆಯ್ಕೆ ಮಾಡಿರದಿದ್ದಲ್ಲಿ ಮತ್ತು ಎಕ್ಸ್ ಚೇಂಜ್‌ಗಳು ಪಾವತಿಯನ್ನು ಪಡೆದ ಮುಂದಿನ ಕೆಲಸದ ದಿನದಂದು ಪಾವತಿಯನ್ನು ಸ್ವೀಕರಿಸದಿದ್ದಲ್ಲಿ ದಯವಿಟ್ಟು ವಿಷಯವನ್ನು ಸದಸ್ಯರಿಗೆ ತಿಳಿಸಿ. ವ್ಯಾಜ್ಯವಿದ್ದಲ್ಲಿ ಸಂಬಂಧಪಟ್ಟ ಸರಕು ಎಕ್ಸ್ ಚೇಂಜ್‌ನ ಹೂಡಿಕೆದಾರರ ದೂರು ಕೇಂದ್ರದಲ್ಲಿ ದೂರು ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಿ.

d) ವ್ಯಾಪಾರದ ದಿನದ ಕೊನೆಗೆ ಸರಕು ಎಕ್ಸ್ ಚೇಂಜ್‌ನಿಂದ SMS ಅಥವಾ ಇಮೇಲ್ ಮೂಲಕ ವ್ಯಾಪಾರ ದೃಢೀಕರಣ ಎಚ್ಚರಿಕೆಗಳು / ವ್ಯವಹಾರದ ವಿವರಗಳನ್ನು ಪಡೆಯಲು ದಯವಿಟ್ಟು ಸದಸ್ಯರಲ್ಲಿ ನಿಮ್ಮ ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಐಡಿಯನ್ನು ದಾಖಲಿಸಿ

25. ನಿಮ್ಮ ಸದಸ್ಯರೊಡನೆ ನೀವು ಠೇವಣಿಯಿಡಬಹುದಾದ ಹಣ ಅಥವಾ ಇತರ ಆಸ್ತಿಗೆ ನೀಡಿದ ರಕ್ಷಣೆಗಳ ಬಗ್ಗೆ, ವಿಶೇಷವಾಗಿ ಸರಕಿನಲ್ಲಿ, ಕಮಾಡಿಟಿ ಡೇರಿವೆಟಿವ್ಸ್(commodity derivatives) ಅಥವಾ ಮಾರುಕಟ್ಟೆಯಲ್ಲಿ ದೋಷವಿದ್ದಲ್ಲಿ ಸದಸ್ಯರು ದಿವಾಳಿಯಾದ ಸಂದರ್ಭದಲ್ಲಿ ನೀವು ಪರಿಚಿತರಾಗಿರಬೇಕು.

26. ನೀವು ಸದಸ್ಯರೊಡನೆ ಇಂಥ ಹಣ ಅಥವಾ ಇತರ ಆಸ್ತಿಯನ್ನು ಠೇವಣಿಯಿಟ್ಟ ಬಗ್ಗೆ ಇಂಥ ಹಣ ಅಥವಾ ಸಾಕ್ಷಿಯನ್ನು ಯಾವ ಖಾತೆಗೆ ಠೇವಣಿ ಮಾಡಬೇಕೆನ್ನುವ ವಿವರಗಳೊಡನೆ ನೀವು ಕಡತದ ಸಾಕ್ಷಿಯನ್ನು ಹೊಂದಿದ್ದೀರೆಂದು ದಯವಿಟ್ಟು ಖಚಿತಪಡಿಸಿಕೊಳ್ಳಿ.

27. ನಿಮ್ಮ ಸಮಸ್ಯೆ / ದೂರುಗಳು ಸಂಬಂಧಪಟ್ಟ ಸದಸ್ಯರು / ಅಧಿಕೃತ ವ್ಯಕ್ತಿಯ (ಅಥೊರೈಸ್ಡ್ ಪರ್ಸನ್) ಮೂಲಕ ಪರಿಹಾರವಾಗುತ್ತಿರದಿದ್ದಲ್ಲಿ ನೀವು ಸಂಬಂಧಪಟ್ಟ ಸರಕು ಎಕ್ಸ್ ಚೇಂಜ್ ಜೊತೆ ವಿಷಯವನ್ನು ಪ್ರಸ್ತಾಪಿಸಬಹುದು. ನಿಮಗೆ ದೂರಿನ ಪರಿಹಾರವು ತೃಪ್ತಿ ತರದಿದ್ದಲ್ಲಿ ನೀವು ವಿಷಯವನ್ನು SEBI ಗಮನಕ್ಕೆ ತರಬಹುದು.

**ಮಾಡಬಾರದ್ದು**

1. ಯಾವುದೇ ನೋಂದಾಯಿಸಿಕೊಳ್ಳದ ಮಧ್ಯವರ್ತಿಗಳ ಜೊತೆ ವ್ಯವಹರಿಸಬೇಡಿ.
2. ಮಾರುಕಟ್ಟೆಯದ್ದಲ್ಲದ ವ್ಯವಹಾರಗಳು ಅಕ್ರಮವಾಗಿದ್ದು ಅವುಗಳು ಎಕ್ಸ್ ಚೇಂಜ್ ವ್ಯಾಪ್ತಿಯ ಹೊರಗೆ ಬರುವುದರಿಂದ ಅಂಥವುಗಳನ್ನು ಮಾಡಬೇಡಿ.
3. ಯಾವುದೇ ಸದಸ್ಯರೊಡನೆ ಖಾತರಿಯ ಆದಾಯ ಒಪ್ಪಂದವನ್ನು ಮಾಡಿಕೊಳ್ಳಬೇಡಿ
4. ಆಕರ್ಷಣೀಯ ಜಾಹೀರಾತುಗಳು, ವದಂತಿಗಳು, ಹಾಟ್ ಟಿಪ್‌ಗಳು, ಪ್ರತಿಫಲದ ಸ್ಪಷ್ಟ / ಸೂಚ್ಯ ಭರವಸೆ, ಇತ್ಯಾದಿಗಳಿಗೆ ಮರುಳಾಗಬೇಡಿ
5. ನಗದು ಪಾವತಿ ಮಾಡಬೇಡಿ / ಲಾಭಗಳು ಹಾಗೂ ಸೆಟ್ಲ್ ಮೆಂಟ್‌ಗಳಿಗೆ ಸದಸ್ಯರಿಂದ ಯಾವುದೇ ನಗದು ತೆಗೆದುಕೊಳ್ಳಬೇಡಿ
6. ರಿಸ್ಕ್ ಡಿಸ್‌ಕ್ಲೋಸರ್ ಡಾಕ್ಯೂಮೆಂಟ್ ಅನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ಮೊದಲೇ ವ್ಯಾಪಾರ ಆರಂಭಿಸಬೇಡಿ.
7. ದೂರವಾಣಿಯ ಮೂಲಕ ನೀಡಿದ ಅಧಿಕ ಮೌಲ್ಯದ ಆರ್ಡರ್‌ಗಳನ್ನು ಲಿಖಿತವಾಗಿ ಬರೆದಿಡುವಲ್ಲಿ ನಿರ್ಲಕ್ಷ್ಯ ತೋರಿಸಬೇಡಿ.
8. ರುಜುಮಾಡದ / ನಕಲು ಕಾಂಟ್ರಾಕ್ಟ್ ನೋಟ್ / ದೃಢೀಕರಣ ಮೆಮೋವನ್ನು ಸ್ವೀಕರಿಸಬೇಡಿ.
9. ಅನಧಿಕೃತ ವ್ಯಕ್ತಿಯ ಸಹಿಯಿರುವ ಕಾಂಟ್ರಾಕ್ಟ್ ನೋಟ್ / ದೃಢೀಕರಣ ಮೆಮೋವನ್ನು ಸ್ವೀಕರಿಸಬೇಡಿ.
10. ನಿಮ್ಮ ಇಂಟರ್ನೆಟ್ ವ್ಯಾಪಾರ ಖಾತೆಯ ಪಾಸ್‌ವರ್ಡ್ ಅನ್ನು ಯಾರ ಜೊತೆಗೂ ಹಂಚಿಕೊಳ್ಳಬೇಡಿ
11. ಸದಸ್ಯರಿಗೆ ಪಾವತಿಗಳು / ಸರಕುಗಳ ವಿತರಣೆಯಲ್ಲಿ ವಿಳಂಬ ಮಾಡಬೇಡಿ.
12. ಹೂಡಿಕೆಗಳಲ್ಲಿನ ಅಪಾಯಗಳನ್ನು ಗಮನಿಸುತ್ತಿರುವುದನ್ನು ಮರೆಯಬೇಡಿ.
13. ಸರಕುಗಳು, ಠೇವಣಿಗಳನ್ನು ನೀಡುವಾಗ ಖಾಲಿ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್‌ಗಳಿಗೆ (DIS) ಸಹಿ ಹಾಕಬೇಡಿ ಹಾಗೂ/ಅಥವಾ ಸಮಯ ಉಳಿಸಲು ಅವುಗಳನ್ನು ಡಿಪಾಸಿಟರಿ ಪಾರ್ಟಿಸಿಪಂಟ್‌ಗಳು (DP) ಅಥವಾ ಸದಸ್ಯರ ಜೊತೆಗಿಡಬೇಡಿ.
14. ಎಕ್ಸ್ ಚೇಂಜ್ ಶಿಫಾರಸು ಮಾಡಿದ ದರಗಳಿಗಿಂತ ಹೆಚ್ಚು ಬ್ರೋಕರೇಜ್ ಕೊಡಬೇಡಿ
15. ಅಧಿಕೃತ ವ್ಯಕ್ತಿಯ ಹೆಸರಿನಲ್ಲಿ ಚೆಕ್ ನೀಡಬೇಡಿ.